**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.</u>**

**ಸಿ.ಸಿ. ನಂ. 251/2023** **ಫ್ರಾ.ಸಾ –2**
**ಚಾ.ಸಾ – 2**

**<u>ದಿನಾಂಕಃ 29.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | | |
|---|---|---|
| ಸಾಕ್ಷಿಯ ಹೆಸರು | : | ಕೇಶವ ಗೌಡ ಕೆ. ಜಿ |
| ತಂದೆಯ ಹೆಸರು | : | ಕೆ. ಗಿರಿಯಪ್ಪ ಗೌಡ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು |
| ವಾಸ ಸ್ಥಳ | : | ವಿರಾಜಪೇಟೆ |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿನಾಂಕ 31.01.2022 ರಿಂದ ಇಲ್ಲಿಯ ತನಕ ವಿರಾಜಪೇಟೆ ವಲಯ ಕಚೇರಿಯಲ್ಲಿ ಅಬಕಾರಿ ಉಪನಿರೀಕ್ಷಕರು ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 11.08.2022 ರಂದು ನಾನು ಚಾಸಾ 1 ಹಾಗೂ ನನ್ನ ಸಹಸಿಬ್ಬಂದಿಯೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆ.ಎ.12.ಜಿ.0824 ನಲ್ಲಿ ಕಾನೂರು ಗ್ರಾಮದಲ್ಲಿ ಸುಮಾರು 04.15 ಗಂಟೆಗೆ ಗಸ್ತು ಮಾಡುತ್ತಿದ್ದಾಗ ಚಾಸಾ 1 ರವರಿಗೆ ಬಂದ ಖಚಿತ ಮಾಹಿತಿ ಏನೆಂದರೆ ಮಲ್ಲಂಗೇರಿ ಪೈಸಾರಿ ಗ್ರಾಮದ ಜೆ. ಆರ್ ಗಣಪತಿಯವರು ಮಧ್ಯವನ್ನು ಮಾರಾಟ ಮಾಡಲು ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ಬಂದಿರುತ್ತದೆ.

ಸದರಿ ಮಾಹಿತಿಯ ಮೇರೆಗೆ ನಾವೆಲ್ಲರೂ ಕಾರ್ಯ ಪ್ರವೃತ್ತರಾಗಿ ಸದರಿ ಸ್ಥಳಕ್ಕೆ ಹೋಗುವ ಮುನ್ನ ದಾರಿಯಲ್ಲಿ ಇದ್ದಂತಹ ಕೆಲವು ವ್ಯಕ್ತಿಗಳನ್ನು ಪರಿಚಯಮಾಡಿಕೊಂಡು ಮನೆಯನ್ನು ತೋರಿಸಲು ಕೋರಿದಾಗ ಒಪ್ಪಿಕೊಂಡು ಸದರಿಯವರು ಒಪ್ಪಿಕೊಂಡು ಮನೆಯನ್ನು ತೋರಿಸಿರುತ್ತಾರೆ.

ಸದರಿಯವರಿಗೆ ನಾವು ಬಂದಿರುವ ವಿಚಾರ ತಿಳಿಸಿ ಪಂಚರಾಗಲು ಕೋರಿದಾಗ ಸದರಿಯವರು ಪಂಚರಾಗಲು ನಿರಾಕರಿಸಿರುತ್ತಾರೆ. ನಂತರ ಇಲಾಖಾ ಸಿಬ್ಬಂದಿಯವರನ್ನು ಪಂಚರನ್ನಾಗಿಸಿ ಮನೆಯ ಮುಂದೆ ತೆರಳಿದಾಗ ಮನೆಯ ಮುಂದೆ ಒಬ್ಬ ವ್ಯಕ್ತಿ ನಿಂತಿದ್ದು ಅವರನ್ನು ವಿಚಾರಿಸಿದಾಗ ಅವರ ಹೆಸರು, ವಿಳಾಸ ತಿಳಿಸಿರುತ್ತಾರೆ. ಸದರಿಯವರ ಮನೆಯನ್ನು ಶೋಧನೆ ಮಾಡಲು ಶೋಧನಾ ವಾರೆಂಟ್ ಪಡೆಯಲು ಮಾನ್ಯ ನ್ಯಾಯಾಲಯದ ಅನುಮತಿ ಪಡೆಯಲು ಸಾಧ್ಯವಾಗದ ಕಾರಣ ಸ್ಥಳದಲ್ಲಿ ಶೋಧನಾ ವಾರೆಂಟ್ ಸಿದ್ದಪಡಿಸಿಕೊಂಡು ಮನೆಯ ಒಳಗೆ ತೆರಳಿದಾಗ ಒಂದು ಮರದ ಕಾಟ್ ಕೆಳಗಡೆ ರೆಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂತು.

ಸದರಿ ರೆಟ್ಟಿನ ಪೆಟ್ಟಿಗೆಯನ್ನು ನೋಡಲಾಗಿ Original choice whiskey ಅವುಗಳನ್ನು ನೋಡಲಾಗಿ ಬ್ಯಾಚ್ ನಂಬರ್ 59 ಎಂದು ನಮುದಾಗಿದ್ದು ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ಎಣಿಸಲಾಗಿ 90 ಮಿಲಿಯ 68 ಟೆಟ್ರಾ ಪ್ಯಾಕೆಟ್‌ಗಳು ಇರುವುದು ಕಂಡು ಬಂತು. ಅದರಲ್ಲಿ ಒಟ್ಟು 6.120 ಲೀ ಇರುವುದು ಕಂಡು ಬಂತು. ಈ ರೀತಿ ಶೇಖರಣೆ ಮಾಡಲು ಯಾವುದಾದರೂ ರಹದಾರಿ ಇದೆಯೇ ಎಂದು ಕೇಳಲಾಗಿ ಸದರಿಯವರು ಇಲ್ಲ ಎಂದು ತಿಳಿಸಿದರು. ಅವರು ಈ ರೀತಿ ಮಧ್ಯವನ್ನು ಇಟ್ಟುಕೊಳ್ಳುವುದು ಅಬಕಾರಿ ಕಾಯ್ದೆ ಪ್ರಕಾರ ಅಪರಾಧವೆಂದು ತಿಳಿಸಿ ಸದರಿಯವರಿಂದ ಮಧ್ಯವನ್ನು ನಮ್ಮ ವಶಕ್ಕೆ ಪಡೆದು ಒಂದು ರೆಟ್ಟಿನ ಪೆಟ್ಟಿಗೆಯ ಬಾಕ್ಸ್ ನಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಹೊಲೆದು ಅರಗಿನಿಂದಸೀಲು ಮಾಡಲಾಯಿತು.

ನಂತರ ಮಾದರಿ ಚೀಟಿಗಳನ್ನು ಸಿದ್ದಪಡಿಸಿಕೊಂಡು ಸಹಿ ಪಡೆದು ಅಂಟಿಸಲಾಯಿತು. ಸದರಿಯವರಿಗೆ ಸಿಆರ್‌ಪಿಸಿ 41 ಪ್ರಕಾರ ಜಾಮೀನಿನ ಮೇಲೆ ಬಿಡುಗಡೆ ಮಾಡಿ ಮಹಜರ್ ಅನ್ನು ಸಂಜೆ 04.30 ರಿಂದ 05.30 ರತನಕ ಮಾಡಲಾಯಿತು. ಮಧ್ಯವನ್ನು ವಶಪಡಿಸಿಕೊಳ್ಳಲಾಯಿತು, ಮುಂದಿನ ಕ್ರಮಕ್ಕಾಗಿ ಕಚೇರಿಗೆ ತರಲಾಯಿತು.

ಸಾಕ್ಷಿಯು ಶೋಧನಾ ವಾರೆಂಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ. ಪಿ 1 ಎಂದು ಗುರುತಿಸಲಾಗಿದೆ. ಸಹಿಯನ್ನು ನಿ. ಪಿ. 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 2 ಎಂದು ಈಗಾಗಲೇ ನಿ. ಪಿ. 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ. ಪಿ 3 ಮತ್ತು 4 ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ರೆಟ್ಟಿನ ಪೆಟ್ಟಿಗೆಯನ್ನು ನೋಡಿ ಗುರುಸಿತಿದ್ದು ಅದನ್ನು ಮು. ಮಾ 1 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯು 68 Original choice whiskey ಟೆಟ್ರಾ ಪ್ಯಾಕೆಟ್‌ಗಳನ್ನು ನೋಡಿ ಗುರುಸಿತಿದ್ದು ಅವುಗಳನ್ನು ಒಟ್ಟಾಗಿ ಮು. ಮಾ 2 ಎಂದು ಈಗಾಗಲೇ ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ. ಎಸ್. ಎಸ್ ವಕೀಲರಿಂದಃ</u>

ನಮ್ಮ ಕಚೇರಿ ವಿರಾಜಪೇಟೆಯಲ್ಲಿದೆ. ಮ. 12.00 ಗಂಟೆಗೆ ವಿರಾಜಪೇಟೆಯನ್ನು ಬಿಟ್ಟೆವು. ಘಟನಾ ಸ್ಥಳ ಮಲ್ಲಂಗೇರಿ ಪೈಸಾರಿ. ಕಾನೂರಿನಿಂದ ಘಟನಾ ಸ್ಥಳ 5 ಕಿ. ಮೀ ದೂರ. ಆರೋಪಿಯ ಮನೆಯ ಅಕ್ಕಪಕ್ಕ ಇತರೇ ಮನೆಗಳಿವೆ ಎಂದರೆ ಸರಿ. ಮಧ್ಯ ಆರೋಪಿಯ ಮನೆಯ ಹಾಲ್ ನಲ್ಲಿ ಸಿಕ್ಕಿರುತ್ತದೆ. ಆರೋಪಿಯ ಮನೆಯಲ್ಲಿ 5 ಕೋಣೆಗಳು ಇತ್ತು. ಹಾಲ್ ನಲ್ಲಿ ಮಂಚದ ಕೆಳಗಡೆ ಮಧ್ಯವಿತ್ತು. ಆರೋಪಿಯ ಜೊತೆ

ಆ ಸಮಯ ಯಾರೂ ಇರಲಿಲ್ಲ. ಅಕ್ಕಪಕ್ಕದ ಮನೆಯವರು ಯಾರು ಇರಲಿಲ್ಲ. ಅಮಾನತುಗೊಳಿಸಿದ ಮೇಲೆ ಮಧ್ಯದ ಮೇಲೆ ಪಂಚರ ಸಹಿ ಪಡೆಯಲಿಲ್ಲ. ಮು. ಮಾ 1 ರೆಟ್ಟಿನ ಬಾಕ್ಸ್ ಮತ್ತು ಮು. ಮಾ 2 ಮಧ್ಯ ಆರೋಪಿಯ ವಶದಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಮು. ಮಾ 1 ಮತ್ತು 2 ಅನ್ನು ಬೇರೆ ಕಡೆಯಿಂದ ತಂದು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಯಾವುದೇ ಕ್ರಮಗಳನ್ನು ಕೈ ಗೊಂಡಿಲ್ಲ ಎಂದರೆ ಸರಿಯಲ್ಲ ಸ್ಥಳದಲ್ಲಿ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.